# ನಗರಸಭಾ ಕಾರ್ಯಾಲಯ, ಮಡಿಕೇರಿ.

ಕ್ರ.ಸಂ.ಮನಸ/ತಾಂತ್ರಿಕ/ಟೆಂಡರ್/10/2009-10/CMSMTDP ದಿನಾಂಕ: 02.02.10

## ಟೆಂಡರ್ ಪ್ರಕಟಣೆ

ಈ ಮೂಲಕ ಪ್ರಕಟಿಸುವುದೇನೆಂದರೆ 2009-10 ಮತ್ತು 2010-11ನೇ ಸಾಲಿಗೆ ಸರ್ಕಾರಿ ಆದೇಶ ಸಂಖ್ಯೆ ನಅಇ/ಸಮಸ/2009, ಬೆಂಗಳೂರು ದಿನಾಂಕ 11.01.2010ರಂತೆ ಮಂಜೂರಾಗಿರುವ **ಮುಖ್ಯ ಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಯೋಜನೆ**ಯಡಿ ಅನುಮೋದನೆಯಾಗಿರುವ ಕೆಳಕಂಡ ಪ್ಯಾಕೇಜ್ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯ ಸೂಚಿತ ದರ್ಜೆಯ ಹಾಗೂ ಈ ನಗರಸಭೆಯಲ್ಲಿ ನೋಂದಾಯಿಸಲ್ಪಟ್ಟಿರುವ ಗುತ್ತಿಗೆದಾರರಿಂದ ಕನಿಷ್ಟ ದರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಟೆಂಡರ್‌ಗಳನ್ನು ನಿಗದಿತ ಇ.ಎಂ.ಡಿ.ಯೊಂದಿಗೆ ಸೀಲ್ ಮಾಡಿದ ಲಕೋಟೆಯಲ್ಲಿಟ್ಟು ಸೂಚಿತ ದಿನಾಂಕದೊಳಗೆ, **"ಪೌರಾಯುಕ್ತರು, ನಗರ ಸಭೆ, ಮಡಿಕೇರಿ "** ಇವರಿಗೆ ತಲುಪಿಸತಕ್ಕದ್ದು.

ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಲ್ಲಿ, ನಗರಸಭೆ ವೆಬ್‌ಸೈಟ್ www.madikericity.gov.in ಹಾಗೂ ಕೊಡಗು ಜಿಲ್ಲಾ ಟೆಂಡರ್ ಬುಲೆಟಿನ್‌ನಲ್ಲಿ ಪಡೆದು ಕೊಳ್ಳಬಹುದು.

**ಟೆಂಡರ್ ಸಲ್ಲಿಸುವ ಬಗ್ಗೆ ವಿವರ**

1 ಟೆಂಡರ್ ಫಾರಂಗಳಿಗೆ ಕೋರಿಕೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 08.03.10ರ ಸಾಯಂಕಾಲ 04.00 ಗಂಟೆವರೆಗೆ.

2 ಟೆಂಡರ್ ಫಾರಂ ಪಡೆಯಲು ಕೊನೆಯ ದಿನಾಂಕ : 09.03.10ರ ಸಾಯಂಕಾಲ 05.30 ಗಂಟೆವರೆಗೆ.

3 ಭರ್ತಿ ಮಾಡಿದ ಸೀಲ್ಡ್ ಟೆಂಡರ್‌ಗಳನ್ನು ಕಚೇರಿಗೆ ಸಲ್ಲಿಸುವ ಕೊನೆಯ ದಿನಾಂಕ : 10.03.10ರ ಸಾಯಂಕಾಲ 04.00 ಗಂಟೆವರೆಗೆ.

4 ಟೆಂಡರ್ ತೆರೆಯುವ ದಿನಾಂಕ : 10.03.10ರ ಸಾಯಂಕಾಲ 05.00 ಗಂಟೆವರೆಗೆ ಅಥವಾ ಸೂಚಿಸಿದ ದಿನದಂದು

| ಪ್ಯಾಕೇಜ್‌ಸಂ. | ಕಾಮಗಾರಿಯ ಹೆಸರು | ಟೆಂಡರಿಗೆ ಇಡಲಾದ ಮೊತ್ತ (ಲಕ್ಷ ರೂ.ಗಳಲ್ಲಿ) | ಟೆಂಡರ್ ಠೇವಣಿ (ರೂ.ಗಳಲ್ಲಿ) | ಗುತ್ತಿಗೆದಾರರ ದರ್ಜೆ | ಕೆಲಸ ಮುಗಿಸ ಬೇಕಾದ ಅವಧಿ (ದಿನಗಳಲ್ಲಿ) | ಟೆಂಡರ್ ಫಾರಂ ಬೆಲೆ (ರೂ.+ಶೇ.8 ತೆರಿಗೆ) | ಟೆಂಡರ್ ಅರ್ಹತೆ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| I | ಇಂದಿರಾನಗರ ಬೋರವೆಲ್‌ನಿಂದ - ಚಾಮುಂಡೇಶ್ವರಿ ನಗರದ ಸಮುದಾಯ ಭವನದವರೆಗಿನ ಮಣ್ಣು ದಾರಿಯನ್ನು ಅಗಲಗೊಳಿಸಿ ಮೆಟಲಿಂಗ್, ಚರಂಡಿ ನಿರ್ಮಾಣ ಮಾಡುವ ಕಾಮಗಾರಿ.<br>ಇಂದಿರಾನಗರದ ಸಮುದಾಯ ಭವನದಿಂದ ಮಂಗಳೂರು ರಸ್ತೆಯನ್ನು ಸಂಪರ್ಕಿಸುವ ಕಾಲುದಾರಿಯ ಅಗಲೀಕರಣ ಮತ್ತು ಸಮತಟ್ಟುಗೊಳಿಸಿ ಕಾಂಕ್ರೀಟ್ ಮಾಡುವ ಕಾಮಗಾರಿ (250 ಮೀ ಚೈನೇಜ್‌ವರೆಗೆ).<br>ಚಾಮುಂಡೇಶ್ವರಿ ನಗರದ ಶಶಿ ಮನೆ ಹಿಂಭಾಗದಿಂದ ಮುಂದಕ್ಕೆ ಕೆಳಭಾಗದಿಂದ ಸಾಗಿ ಇಂದಿರಾ ನಗರದ ಕಡೆಗೆ ಸಂಪರ್ಕ ಕಲ್ಪಿಸುವ ಫುಟ್‌ಪಾತ್‌ನ ಕಾಂಕ್ರೀಟಿಕರಣ ಕಾಮಗಾರಿ. | 42.75 | 85,500/- | I | 60 | 4,275/- | KW2 |
| II | ಡಾ॥ ರವಿ ಅಪ್ಪಾಜಿಯವರ ಕ್ಲಿನಿಕ್‌ನಿಂದ ಏ. ವಿ. ಶಾಲೆವರೆಗಿನ ರಸ್ತೆ ಪೇವರ್ ಫಿನಿಶ್ ಮರುಡಾಂಬರೀಕರಣ ಕಾಮಗಾರಿ.<br>ಶ್ರೀ ಮುತ್ತಪ್ಪ ದೇವಸ್ಥಾನದ ಕೆಳಗಿನ ರಸ್ತೆಯಿಂದ ರಾಮ ಬಸ್ ಮಾಲಿಕರ ಹಳೆ ಮನೆವರೆಗಿನ ರಸ್ತೆ ಪೇವರ್ ಫಿನಿಶ್ ಮರುಡಾಂಬರೀಕರಣ ಕಾಮಗಾರಿ.<br>ಸಂಪಿಗೆ ಕಟ್ಟೆಯಿಂದ ಏ. ವಿ. ಶಾಲೆವರೆಗೆ ರಸ್ತೆ ಮರುಡಾಂಬರೀಕರಣ ಕಾಮಗಾರಿ.<br>ನಗರಸಭಾ ಕಛೇರಿ ಹಿಂಭಾಗದಿಂದ ಶ್ರೀ ಕಂಚಿ ಕಾಮಾಕ್ಷಿ ದೇವಸ್ಥಾನದವರೆಗೆ, ಹೋಟೆಲ್ ಕುಮಾರ್ ವಿಲಾಸದಿಂದ ಪೆನ್ಷನ್ ಲೇನ್ ರಸ್ತೆ ಮುಖಾಂತರ ನಗರಸಭಾ ಕಛೇರಿ ಹಿಂಭಾಗದವರೆಗೆ ಹಾಗೂ ಎರಡು ಅಡ್ಡ ರಸ್ತೆಗಳ ಮರುಡಾಂಬರೀಕರಣ ಕಾಮಗಾರಿ. | 88.75 | 1,77,500/- | I | 45 | 8,875/- | KW3 |

| | | | | | | | |
|---|---|---|---|---|---|---|---|
| III | ತ್ಯಾಗರಾಜ ಕಾಲೋನಿ ಮಸೀದಿ ಮುಂಭಾಗದ 2 ರಸ್ತೆಗಳನ್ನು ಮರುಡಾಂಬರೀಕರಣಗೊಳಿಸುವ ಕಾಮಗಾರಿ.<br>ಕಾಡ್‌ಮಮ್ ಸೊಸೈಟಿ ಪಕ್ಕದಿಂದ ಕೆಳಗಿನ ಕೊಡವ ಸಮಾಜ ಮುಂಭಾಗಕ್ಕಾಗಿ ಸಾಗಿ ಶ್ರೀ ಓಂಕಾರೇಶ್ವರ ದೇವಸ್ಥಾನ ಹಿಂಭಾಗದ ರಸ್ತೆಯನ್ನು ಡಾಂಬರೀಕರಣಗೊಳಿಸುವ ಕಾಮಗಾರಿ, ಪುಟಾಣಿನಗರದ ಎಲ್ಲಾ ರಸ್ತೆಗಳನ್ನು ಡಾಂಬರೀಕರಣಗೊಳಿಸುವ ಮತ್ತು ಆಯ್ದ 2 ಭಾಗದಲ್ಲಿ ರಸ್ತೆ ನಿರ್ಮಾಣ ಕಾಮಗಾರಿ.<br>ಮಿಲ್ಕ್ ಡೈರಿಯಿಂದ – ವಾರ್ತಾ ಭವನ – ಶ್ರೀ ಕುಂದುರುಮೊಟ್ಟೆ ದೇವಸ್ಥಾನ – ಎಂ. ಎಂ. ವೃತ್ತದವರೆಗೆ ರಸ್ತೆ ಮರುಡಾಂಬರೀಕರಣ ಕಾಮಗಾರಿ.<br>ಐ.ಟಿ.ಐ. ಹಿಂಭಾಗದ ಶ್ರೀ ಅಪ್ಪಯ್ಯರವರ ಮನೆಯಿಂದ ಹಳೆ ಕಾಲೂರು ರಸ್ತೆ ಸೇರುವವರೆಗೆ ರಸ್ತೆ ಡಾಂಬರೀಕರಣ ಕಾಮಗಾರಿ ಮತ್ತು ಮಾರ್ಕೇಟ್‌ನಿಂದ – ಎಲೆಪೇಟೆ ರಸ್ತೆ – ರಾಣಿ ಪೇಟೆ ರಸ್ತೆ ಸೇರುವವರೆಗೆ ರಸ್ತೆ ಮರುಡಾಂಬರೀಕರಣ ಕಾಮಗಾರಿ.<br>ಐ.ಟಿ.ಐ. ಒಳಭಾಗದಲ್ಲಿ ರಸ್ತೆ ನಿರ್ಮಾಣ ಕಾಮಗಾರಿ. | 87.07 | 1,74,140/– | I | 45 | 8,707/– | KW3 |
| IV | ಮಂಗಳಾದೇವಿ ನಗರ ನಾಣಿ ಮನೆಯಿಂದ ಕೆಳಭಾಗ ಮಂಗಳಾದೇವಿ ನಗರ ಕೊನೆವರೆಗೆ ಮಳೆನೀರು ಹ್ಯೂಂ ಪೈಪ್ ಚರಂಡಿ ಕಾಮಗಾರಿ, ಮಂಗಳಾದೇವಿ ನಗರದ ಗುಂಡಿಯ ಕಲ್ವರ್ಟ್‌ನಿಂದ – ಸಮುದಾಯ ಭವನದ ಕಡೆಗೆ ಮಳೆನೀರು ಚರಂಡಿ ನಿರ್ಮಾಣ ಕಾಮಗಾರಿ ಮತ್ತು ಮಂಗಳಾದೇವಿನಗರ ಕೆಳಭಾಗಕ್ಕೆ ಹೋಗುವ ಮುಖ್ಯ ರಸ್ತೆಯ ಕ್ರಿಸ್ಟಲ್ ಕೋರ್ಟ್ ಹೋಟೆಲಿನ ಹಿಂಭಾಗದ ಕಲ್ವರ್ಟ್‌ನಿಂದ ಮೈಸೂರು ರಸ್ತೆವರೆಗಿನ ರಸ್ತೆ ಬದಿಯಲ್ಲಿ ಕಾಂಕ್ರೀಟ್ ಚರಂಡಿ ನಿರ್ಮಾಣ ಕಾಮಗಾರಿ.<br>ಅಶ್ವಿನಿ ಆಸ್ಪತ್ರೆ ಮುಂದಿನ ರಸ್ತೆಯಲ್ಲಿ ಆಸ್ಪತ್ರೆ 2ನೇ ಗೇಟ್‌ಬಳಿಯಿಂದ ಮೈಸೂರು ರಸ್ತೆ ಸಂಪರ್ಕಿಸುವ ಡಾಂಬರು ರಸ್ತೆಯನ್ನು ಕಾಂಕ್ರೀಟಿಕರಣಗೊಳಿಸಿ 1 ಬದಿಯಲ್ಲಿ ಕಾಂಕ್ರೀಟ್ ಚರಂಡಿ ನಿರ್ಮಾಣ ಕಾಮಗಾರಿ. | 44.85 | 89,700/– | I | 60 | 4,485/– | KW2 |
| V | ಕನ್ನಂಡಬಾಣೆ ಪಂಪ್‌ಹೌಸ್ ಪಕ್ಕದ ರಾಜು ಮನೆ ಕಡೆಗೆ ಸಾಗುವ ಜಲ್ಲಿ ರಸ್ತೆಯನ್ನು ಡಾಂಬರೀಕರಣಗೊಳಿಸುವ ಕಾಮಗಾರಿ, ಸಂಪಿಗೆ ಕಟ್ಟೆ ಸರ್ಕಲ್ ಬಳಿ ಬೀರಾನ ಕಟ್ಟೆಕಡೆ ಸಾಗುವ ಎಡಭಾಗದ ರಸ್ತೆಯನ್ನು ಅಗಲೀಕರಣಗೊಳಿಸಿ ಮೆಟಲಿಂಗ್ ಮಾಡುವ ಕಾಮಗಾರಿ ಮತ್ತು ಆಜಾದ್‌ನಗರ ಬಡಾವಣೆಯಲ್ಲಿ ರಸ್ತೆ ನಿರ್ಮಾಣ ಕಾಮಗಾರಿ.<br>ಐ.ಟಿ.ಐ. ಜಂಕ್ಷನ್‌ನಿಂದ ಗೃಹ ನಿರ್ಮಾಣ ಕಾಲೋನಿ ರಸ್ತೆ ಮತ್ತು ಡಿ.ಎ.ಆರ್. ಒಳಭಾಗದ ರಸ್ತೆ ಮರುಡಾಂಬರೀಕರಣ ಹಾಗೂ ಒಂದು ಬದಿ ಕಾಂಕ್ರೀಟ್ ಚರಂಡಿ ನಿರ್ಮಾಣ ಕಾಮಗಾರಿ ಮತ್ತು ಹೊಸಬಡಾವಣೆಯ ಶ್ರೀ ಅಪ್ಪಸ್ವಾಮಿರವರ ಮನೆಯಿಂದ ಶ್ರೀ ಗಣೇಶ್‌ರವರ ಮನೆವರೆಗೆ ಚರಂಡಿ ನಿರ್ಮಾಣ ಕಾಮಗಾರಿ. | 28.05 | 56,100/– | I | 60 | 2,805/– | KW2 |
| | ಇಂಡಸ್ಟ್ರಿಯಲ್ ರಸ್ತೆ ಎರಡು ಬದಿ ಚರಂಡಿ ಎತ್ತರಿಸಿ ಇಂಟರ್‌ಲಾಕ್ ಪೇವ್‌ಮೆಂಟ್ ನಿರ್ಮಾಣ ಹಾಗೂ ಆಯ್ದ ಬಾಗದಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿ. | | | | | | |

| | | | | | | | |
|---|---|---|---|---|---|---|---|
| VI | ಅಶೋಕ ಪುರದಿಂದ ಬಿ.ಡಿ.ಓ. ಕಛೇರಿಯ ಮೂಲಕ ಸಾಗುವ ಡಾಂಬರು ರಸ್ತೆಗೆ ಜೋಡಣ ರಸ್ತೆ ನಿರ್ಮಾಣ (Link Road) ಕಾಮಗಾರಿ, ಅಶ್ವಿನಿ ಆಸ್ಪತ್ರೆ ಎಡಭಾಗದಲ್ಲಿ ಬಡಾವಣೆಗೆ ಸಾಗುವ ಜಲ್ಲಿ ರಸ್ತೆಯನ್ನು ಮೆಟಲಿಂಗ್ ಮಾಡಿ ಡಾಂಬರೀಕರಣಗೊಳಿಸುವ ಕಾಮಗಾರಿ, ಹಳೆ ಸಿದ್ದಾಪುರ ರಸ್ತೆಯಿಂದ ಹೆಚ್.ಪಿ. ಗ್ಯಾಸ್ ಗೊಡಾನ್‌ವರೆಗೆ ರಸ್ತೆ ಮರು ಡಾಂಬರೀಕರಣ ಕಾಮಗಾರಿ ಮತ್ತು ಕುಮುದಾಸುಬ್ಬಯ್ಯ ಮನೆ ಬಳಿಯ ಕುಸಿದ ಫುಟ್ಪಾತ್ ನಿರ್ಮಾಣ ಕಾಮಗಾರಿ ಮತ್ತು ರಸ್ತೆ ಬದಿ ಬರೆ ಕುಸಿಯದಂತೆ ತಡೆಗೋಡೆ ನಿರ್ಮಾಣ ಕಾಮಗಾರಿ. | 29.20 | 58,400/- | I | 60 | 2,920/- | KW2 |

**ಷರತ್ತುಗಳು:**

1 ಇ.ಎಂ.ಡಿ. ಹಣವನ್ನು ಪೌರಾಯುಕ್ತರು, ನಗರಸಭೆ, ಮಡಿಕೇರಿರವರ ಹೆಸರಿನಲ್ಲಿ ಖರೀದಿಸಿ ಟೆಂಡರ್‌ನೊಂದಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

2 ಪ್ಯಾಕೇಜ್ ಸಂಖ್ಯೆ 2 ಮತ್ತು 3ರ ಕಾಮಗಾರಿಗೆ ದ್ವಿ ಲಕೋಟೆ ಪದ್ಧತಿ (ತಾಂತ್ರಿಕ ಮತ್ತು ಹಣಕಾಸು ಬಿಡ್) ಅನ್ವಯಿಸುತ್ತದೆ. ಪ್ಯಾಕೇಜ್ ಸಂಖ್ಯೆ 2 ಮತ್ತು 3ರ ಪ್ಯಾಕೇಜ್‌ಗಳ ಟೆಂಡರ್‌ನಲ್ಲಿ ಭಾಗವಹಿಸುವ ಟೆಂಡರ್‌ದಾರರು ಈ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಅವಶ್ಯಕವಾಗಿ ಬೇಕಾಗಿರುವ ಉಪಕರಣಗಳಾದ 40-60 ಟಿ.ಪಿ.ಹೆಚ್. ಹಾಟ್ ಮಿಕ್ಸ್ ಪ್ಲಾಂಟ್, ಸೆನ್ಸರ್ ಕಂಟ್ರೋಲ್ಡ್ ಹೈಡ್ರೋಸ್ಟಾಟಿಕ್ ಪೇವರ್ ಫಿನಿಶರ್, ವೈಬ್ರೆಟರಿ ರೋಲರ್, ಸಾಯಿಲ್ ಕಾಂಪಾಕ್ಟರ್, ಏರ್ ಕಂಪ್ರೆಸ್ಸರ್, ಟಿಪ್ಪರ್‌ಗಳು ಮುಂತಾದವುಗಳನ್ನು ಸ್ವಂತವಾಗಿ ಹೊಂದಿರತಕ್ಕದ್ದು. ಇವುಗಳನ್ನು ಹೊಂದಿರುವ ಬಗ್ಗೆ ದೃಢೀಕೃತ ಪುರಾವೆಗಳನ್ನು ಟೆಂಡರ್‌ಗೆ ಅರ್ಜಿ ಸಲ್ಲಿಸುವಾಗ ಸಲ್ಲಿಸತಕ್ಕದ್ದು. ಯಂತ್ರೋಪಕರಣಗಳ ಬಾಡಿಗೆ ಕರಾರನ್ನು ಸಹಾ ಪರಿಗಣಿಸಲಾಗುವುದು.

3 ಗುತ್ತಿಗೆದಾರರು ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಬದ್ಧರಾಗಿರತಕ್ಕದ್ದು. ಹಾಗೂ ಒಳಗುತ್ತಿಗೆ ನೀಡತಕ್ಕದ್ದಲ್ಲ.

4 ಕಾಲಕಾಲಕ್ಕೆ ಬದಲಾವಣೆಯಾಗುವ ದರಸೂಚಿಯು ಈ ಕಾಮಗಾರಿಗಳಿಗೆ ಅನ್ವಯಿಸುವುದಿಲ್ಲ ಮತ್ತು ಸಾಮಗ್ರಿಗಳ ಬೆಲೆ ಹೆಚ್ಚಳ ಅನ್ವಯಿಸುವುದಿಲ್ಲ. ಈ ಬಗ್ಗೆ ಯಾವುದೇ ತಂಟೆ ತಕರಾರು ಮಾಡಲು ಅವಕಾಶವಿರುವುದಿಲ್ಲ.

5 ಈ ಟೆಂಡರ್‌ನ್ನು ಒಪ್ಪುವ ಅಥವ ತಿರಸ್ಕರಿಸುವ ಅಧಿಕಾರ ಸಕ್ಷಮ ಪ್ರಾಧಿಕಾರ ಹೊಂದಿರುತ್ತದೆ.

6 ಕಾಮಗಾರಿ ಪ್ರಾರಂಭದ ಮೊದಲು ಪ್ರಗತಿ ಹಂತದಲ್ಲಿ ಹಾಗೂ ಕಾಮಗಾರಿ ಮುಕ್ತಾಯದ ನಂತರ ಹೀಗೆ 3 ಹಂತಗಳ ಪೋಸ್ಟ್ ಕಾರ್ಡ್ ಅಳತೆಯ ಛಾಯಾಚಿತ್ರಗಳನ್ನು ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಿಂದಲೇ ಒದಗಿಸತಕ್ಕದ್ದು.

7 ಇನ್ನಿತರ ಷರತ್ತುಗಳು ಕೆ.ಡಬ್ಲ್ಯೂ2 ಮತ್ತು ಕೆ.ಡಬ್ಲ್ಯೂ.3ಗೆ ಒಳಪಟ್ಟಿರುತ್ತದೆ ಹಾಗೂ ಕೆ.ಟಿ.ಪಿ.ಪಿ. ಕಾಯ್ದೆಯಂತೆ ಎಲ್ಲಾ ಷರತ್ತುಗಳು ಅನ್ವಯಿಸುತ್ತದೆ.

8 ಯಶಸ್ವಿ ಬಿಡ್‌ದಾರರು ಮೇಲಿನ ಎಲ್ಲಾ ಶರತ್ತುಗಳಿಗೆ ಬದ್ದರಾಗಿ ರೂ.100/- ಮೌಲ್ಯದ ದಸ್ತಾವೇಜಿನಲ್ಲಿ ನಿಗದಿತ ನಮೂನೆ ಕರಾರು ಪತ್ರ ಬರೆದು ಕೊಡತಕ್ಕದ್ದು.

9 ಯಾವುದೇ ಶರತ್ತಿನ ಉಲ್ಲಂಘನೆ ಆದಲ್ಲಿ, ನಿಯಮಾನುಸಾರ ಕ್ರಮ ಕೈಗೊಂಡು ಇ.ಎಂ.ಡಿ. ಹಣವನ್ನು ಮುಟ್ಟುಗೋಲು ಹಾಕಿಕೊಂಡು, ಮರುಟೆಂಡರು ಮೂಲಕ ಕಾಮಗಾರಿ ನಿರ್ವಹಿಸಲು ಹಾಗೂ ಮರುಟೆಂಡರಿನಲ್ಲಿ ಉಂಟಾಗಬಹುದಾದ ನಷ್ಟಕ್ಕೆ 1ನೇ ಗುತ್ತಿಗೆದಾರರನ್ನು ಹೊಣೆಗಾರರನ್ನಾಗಿಸಲಾಗುವುದು.

10 ಒಂದು ವೇಳೆ ದರಗಳು ಅಂದಾಜಿಗಿಂತ ಕಡಿಮೆ ನಮೂದಿಸಲ್ಪಟ್ಟಲ್ಲಿ ಅಂದಾಜಿನ ದರಕ್ಕೆ ಆಗುವ ವ್ಯತ್ಯಾಸಕ್ಕೆ ಡಿ.ಡಿ.ಯನ್ನು ಪೌರಾಯುಕ್ತರ ಹೆಸರಿನಲ್ಲಿ ಪಡೆದು ಲಗತ್ತಿಸತಕ್ಕದ್ದು.

11 ಕಾಮಗಾರಿಯ ಬಿಲ್ಲಿನಲ್ಲಿ ಶೇ. 1ರಷ್ಟನ್ನು ಕಾರ್ಮಿಕ ಕಲ್ಯಾಣ ನಿಧಿ ವಂತಿಗೆಗೆ ಹಾಗೂ ಸರ್ಕಾರವು ಕಾಲ ಕಾಲಕ್ಕೆ ನಿಗದಿಪಡಿಸುವ ತೆರಿಗೆಗಳನ್ನು ಕಟಾಯಿಸಿಕೊಂಡು ಬಿಲ್ಲನ್ನು ನಿಯಮಾನುಸಾರ ಪಾವತಿಸಲಾಗುವುದು.

12 ಕಾಮಗಾರಿಯು ಪೂರ್ಣಗೊಂಡ ದಿನಾಂಕದಿಂದ ಮುಂದಿನ 2 ವರ್ಷಗಳವರೆಗೆ ಕಾಮಗಾರಿ ನಿರ್ವಹಣೆಯನ್ನು ಗುತ್ತಿಗೆದಾರರು ಸ್ವಂತ ಖರ್ಚಿನಲ್ಲಿ ನಿರ್ವಹಿಸತಕ್ಕದ್ದು. ನಿರ್ವಹಣಾ ಅವಧಿ ನಂತರವೇ ಭದ್ರತಾ ಠೇವಣಿಯನ್ನು ಹಿಂದಿರುಗಿಸಲಾಗುವುದು.

13 ಟೆಂಡರ್ ಕರಾರು ಮಾಡಿಕೊಂಡು 2 ದಿನಗಳ ಒಳಗಾಗಿ ಕಾಮಗಾರಿಯನ್ನು ಪ್ರಾರಂಭಿಸದೇ ಇದ್ದಲ್ಲಿ ಯಾವುದೇ ಮುನ್ಸೂಚನೆ ನೀಡದೆ ಟೆಂಡರನ್ನು ರದ್ದುಪಡಿಸಲಾಗುವುದು.

14 ಕಾಮಗಾರಿ ಆರಂಭಿಸುವ ಮೊದಲು, ಪ್ರಗತಿ ಹಂತದಲ್ಲಿ ಹಾಗೂ ಕಾಮಗಾರಿ ಪೂರ್ಣಗೊಂಡ ನಂತರದಲ್ಲಿ ಕಾಮಗಾರಿ ಗುಣಮಟ್ಟವನ್ನು 3ನೇ ಪಾರ್ಟಿ ಪರಿಶೀಲನೆಗೆ ಒಳಪಡಿಸಲಾಗುವುದು. ಸಾಮಗ್ರಿಗಳಿಗೆ ಉಪಯೋಗಿಸಲ್ಪಡುವ ಸಾಮಗ್ರಿಗಳ ಗುಣಮಟ್ಟವನ್ನು ಸಹಾ ಗುಣಮಟ್ಟ ಪರೀಕ್ಷೆಗೆ ಒಳಪಡಿಸಲಾಗುವುದು. ಹಾಗೂ ಅವರ ವರದಿಯಲ್ಲಿನ ಸಲಹೆ/ಸೂಚನೆಗಳ ಅನುಸಾರ ಬಿಲ್ ಪಾವತಿಗೆ ಕ್ರಮ ಕೈಗೊಳ್ಳಾಗುವುದು.

15 ನಗರಸಭಾ ಆರ್ಥಿಕ ಪರಿಸ್ಥಿತಿಗಳಿಗನುಗುಣವಾಗಿ ಬಿಲ್ ಪಾವತಿಸಲಾಗುವುದು.

16 ಈ ಕಛೇರಿಯಿಂದ ನೀಡುವ ಇತರೆ ಎಲ್ಲಾ ಷರತ್ತುಗಳಿಗೆ ಬದ್ದರಾಗಿರತಕ್ಕದ್ದು.

| | | | |
|---|---|---|---|
| ಸಹಿ/- | ಸಹಿ/- | ಸಹಿ/- | ಸಹಿ/- |
| (ಪಿ. ಡಿ. ಪೊನ್ನಪ್ಪ) | (ಲತಾ ಬಂಗೇರ) | (ಟಿ. ಎಸ್. ಪ್ರಕಾಶ್) | (ಕೆ. ಶ್ರೀಕಾಂತ್ ರಾವ್) |
| ಅಧ್ಯಕ್ಷರು, | ಉಪಾಧ್ಯಕ್ಷರು, | ಸ್ಥಾಯಿ ಸಮಿತಿ ಛೇರ್ಮನ್, | ಪೌರಾಯುಕ್ತರು, |
| ನಗರಸಭೆ, ಮಡಿಕೇರಿ. | ನಗರಸಭೆ, ಮಡಿಕೇರಿ. | ನಗರಸಭೆ, ಮಡಿಕೇರಿ. | ನಗರಸಭೆ, ಮಡಿಕೇರಿ. |